<u>ದಿ:**06.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಪಾಟೀ ಸವಾಲು</u>:- ಆರೋಪಿ ಪರ H.H., ವಕೀಲರಿಂದಃ-

ನಾನು ಎಸ್‌ಎಸ್‌ಎಲ್‌ಸಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಜಗಳೂರು ಪಟ್ಟಣದಲ್ಲಿ ನನಗೆ ಸೇರಿದ ಟೀ ಅಂಗಡಿ ಇರುತ್ತದೆ ಎಂದರೆ ಸರಿ. ನಾನು ಸದರಿ ಅಂಗಡಿಯನ್ನು ಬೆಳಿಗ್ಗೆ 7.00 ಗಂಟೆಯಿಂದ ಸಂಜೆ 6.00 ಗಂಟೆ ವರೆಗೂ ನಡೆಸುತ್ತೇನೆ . ನನ್ನ ಅಂಗಡಿಯು ಜಗಳೂರು ಪಟ್ಟಣದ ಮರನಹಳ್ಳಿ ರಸ್ತೇಯ ಸರ್ಕಲ್ ನಲ್ಲಿ ಇರುತ್ತದೆ . ನನಗೆ ಸದರಿ ಟೀ ಅಂಗಡಿಯಿಂದ ದಿನಕ್ಕೆ ರೂ. 1000 ಯಿಂದ ರೂ. 1500 ವ್ಯಾಪಾರ ಆಗುತ್ತದೆ . ಸಾಕ್ಷಿ ಮುಂದುವರೆಸಿ ನಾನು ಸೇವಾ ಕೇಂದ್ರ ನಡೆಸುತ್ತೇನೆ . ಅದರಿಂದ ಪ್ರತಿದಿನ 500 ರೂ ಆಧಾಯ ಬರುತ್ತದೆ . ನಾನು ANY ONE BANK ಸೇವಾ ಕೇಂದ್ರ ನಡೆಸುತ್ತಿದ್ದೇನೆ . ಈ ಬಗ್ಗೆ ನಾನು ನನ್ನ ಪಿರ್ಯಾದು ಮತ್ತು ಮುಖ್ಯವಿಚಾರಣೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ನಡೆಸುವ ಸೇವಾ ಕೇಂದ್ರ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಅನುಮೊಧನೆ ಪಡೆದುಕೊಂಡ ಸೇವಾ ಕೇಂದ್ರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸೇವಾಕೇಂದ್ರ ನಡೆಸಲು ಪಟ್ಟಣ ಪಂಚಾಯಿತ ಪರವಾನಗೆ ಪಡೆಕೊಂಡಿರುತ್ತೇನೆ . ಸದರಿ ಪರವಾನಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ . ನನಗೆ ಬರುವ ಆಧಾಯದಲ್ಲಿ ಖರ್ಚು ತಗೆದು ಪ್ರತಿದಿನ ರೂ.500 ಉಳಿತಾಯ ಆಗುತ್ತದೆ . ನನಗೆ ರೂ. 500 ರಿಂದ 800 ಗಳಿಸುತ್ತೀರ ಎಂದರೆ ಸಾಕ್ಷಿ ಇನ್ನು ಜಾಸ್ತಿ ಆಧಾಯ ಬರುತ್ತದೆ ಎಂದುಹೇಳುತ್ತಾರೆ . ನನಗೆ ಇಬ್ಬರು ಮಕ್ಕಳು ಇರುತ್ತಾರೆ . ನನ್ನ ಮಗ ಪದವಿ ಪಡೆದುಕೊಂಡಿರುತ್ತಾರೆ . ಮಗಳ ಈಗ ಮೊದಲನೇ ವರ್ಷದ ಪದವಿ ವ್ಯಾಸಾಂಗ ಮಾಡುತ್ತಿದ್ದಾರೆ . ನನ್ನ ಮಕ್ಕಳ ವಿದ್ಯಾಭ್ಯಾಸ ಖರ್ಚನ್ನು ನನ್ನ ಟೀ ಅಂಗಡಿಯಿಂದ ಬರುವ ಆಧಾಯದಲ್ಲಿ ನೋಡಿಕೊಳ್ಳುತ್ತೇನೆ ಎಂದರೆ ಸಾಕ್ಷಿ ನನ್ನ ತಾಯಿಗೆ ಸೇರಿದ ಹೊಲ ಮತ್ತು ಮನೆ ಇರುತ್ತದೆ ಎಂದು ಹೇಳುತ್ತಾರೆ . ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಯಾವುದೇ ಫೈನಾನ್ಸ್ ವ್ಯವಹಾರ ಇರುವುದಿಲ್ಲ . ನಾನು ಆರೋಪಿ ಬಿಟ್ಟು ಬೇರೆ ಯಾರಿಗೂ ಹಣದ ಸಹಾಯ ನೀಡಿರುವುದಿಲ್ಲ . ನಾನು ಇದೇ ನ್ಯಾಯಾಲಯದಲ್ಲಿ ಇದೇ ರೀತಿಯ 4-5 ಚೆಕ್ ಅಮಾನತು ಪ್ರಕರಣಗಳು ಬೇರೆ ಯವರ ವಿರುದ್ಧ ಸಲ್ಲಿಸಿರುತ್ತೀನಿ ಎಂದರೆ ಸಾಕ್ಷಿ ಸನ್ 2019 ರ ಪೂರ್ವದಲ್ಲಿ 2 ಪ್ರಕರಣಗಳನ್ನು ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ .

ಸಿ.ಸಿ.1329/2022 ನಾನು ತಾನೋಜಿ ಗೋಸಾಯಿ ಎಂಬುವವರ ವಿರುದ್ಧಚೆಕ್ ಅಮಾನತು ಪ್ರಕರಣವನ್ನು ಇದೇ ನ್ಯಾಯಾಲದಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ.

ನಾನು O.S.84/2021 ರಂತೆ ಸತ್ಯಪ್ಪ ಎಂಬುವವರ ವಿರುದ್ಧ ಪ್ರಾಮಿಸರಿ ನೋಟ್ ನ ಹಣ ವಸೂಲಾತಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಸತ್ಯಪ್ಪರವರ ವಿರುದ್ಧ ಅವಾಲ್ ಜಾರಿ ಅರ್ಜಿ Ex.12/2022 ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಸಿ.ಸಿ.625/2023 ನಾನು ನೀಲಪ್ಪ ಎಂಬುವವರ ವಿರುದ್ಧಚೆಕ್ ಅಮಾನತು ಪ್ರಕರಣವನ್ನು ಇದೇ ನ್ಯಾಯಾಲದಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ . ನಾನು ಬಡ್ಡಿ ವ್ಯವಹಾರ ಮಾಡುತ್ತಿನಿ ಎಂದರೆ ಸರಿಯಲ್ಲ. ನಾನು ಬ್ಯಾಂಕ್ ನೌಕರಿಗೂ ಹಾಗೂ ಶಿಕ್ಷಕರಿಗೆ ಬಡ್ಡಿ ವ್ಯವಹಾರ ಮಾಡುತ್ತಾ ಸಾಲವನ್ನು ನೀಡುತ್ತೇನೆ ಎಂದರೆ ಸರಿಯಲ್ಲ. ನನ್ನ ಫೋನ್ ಫೇ ಖಾತೆಯ ಸಂಖ್ಯೆ 8660724612 ಇರುತ್ತದೆ . ನನ್ನಿಂದ ಸಾಲ ಪಡೆದವರು ಪೋ ಫೇ ಮೂಲಕ ಹಣವನ್ನು ವಾಪಸ್ ನೀಡುತ್ತಾರೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿಯವರು ಸುಮಾರು ಬಾರಿ ಪೋನ್ ಫೇ ಮೂಲಕ ನನ್ನ ಬ್ಯಾಂಕ್ ಖಾತೆಗೆ ಹಣವನ್ನು ಜಮೆ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ ನನ್ನ ಬ್ಯಾಂಕ್ ಖಾತೆಗೆ ಪೋನ್ ಫೇ ಮೂಲಕ 98,000 ಸಾವಿರ ಜಮೆ ಮಾಡಿರುತ್ತಾರೆ ಎಂರದೆ ಸಾಕ್ಷಿ ಅಷ್ಟೊಂದು ಜಮೆ ಮಾಡಿರುವುದಿಲ್ಲ ಎಂದು ಹೇಳುತ್ತಾರೆ . ಸದರಿ ರೂ .98,000 ಸಾವಿರ ಹಣವನ್ನು ಈ ಪ್ರಕರಣ ದಾಖಲು ಮಾಡವ ಪೂರ್ವದಲ್ಲಿ ಆರೋಪಿ ನನ್ನ ಖಾತೆಗೆ ಪೋನ್ ಫೇ ಮೂಲಕ ಜಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಆರೋಪಿಗೆ ನೀಡಿದೆ ಎಂದು ಹೇಳುವ ಹಣವನ್ನು ನಮ್ಮ ಅಂಗಡಿ ಬಳಿ ನೀಡಿರುತ್ತೇನೆ . ನಾನು ಆರೋಪಿಗೆ ನೀಡಿದೆ ಎಂದು ಹೇಳುವ ಹಣವು ರೂ.500 ಮುಖಬೆಲೆಯ ನೋಟುಗಳು ಇರುತ್ತವೆ . ನಾನು ಆರೋಪಿಗೆ ರೂ .1 ಲಕ್ಷ ಹಣವನ್ನು ನನ್ನ ಖಾತೆ ಮೂಲಕ ನೀಡಲು , ನನ್ನ ಖಾತೆಯಲ್ಲಿ ಅಷ್ಟೊಂದು ಹಣ ಇರಲಿಲ್ಲ . ನಾನು ಸೇವಾ ಕೇಂದ್ರ ನಡೆಸುವ ಸಲುವಾಗಿ ನನಗೆ RBI ನಿಯಮವಾಳಿ ಗೊತ್ತಿರುತ್ತದೆ ಎಂದರೆ ಸಾಕ್ಷಿ ಅಷ್ಟೊಂದು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ . ಸದರಿ RBI ನಿಯಮಾವಳಿ ಪ್ರಕಾರ ರೂ .20 ಸಾವಿರ ಮೇಲ್ಪಟ್ಟ ವ್ಯವಹಾರವು ನಗದಿನ ಮೂಲಕ ನಡೆಯ ಬಾರದು ಎಂದು ಇರುತ್ತದೆ ಎಂದರೆ ಸರಿ.

ನಾನು ಆರೋಪಿಗೆ ದಿ: 18.10.2024 ರಂದು ರೂ .1 ಲಕ್ಷ ಹಣವನ್ನು ಬೇಕೆಂದು ಕೇಳಿರುತ್ತಾರೆ . ನಾನು ಮರುದಿನ ಸದರಿ ಹಣವನ್ನು ಆರೋಪಿಗೆ ನೀಡಿರುತ್ತೇನೆ . ಆರೋಪಿ ನಿಪಿ 1 ಚೆಕ್ ಅನ್ನು ಅವರ ಮನೆಯಿಂದ ತಂದು ಕೊಟ್ಟಿರುತ್ತಾರೆ . ನಿಪಿ 1 ಚೆಕ್ ನಲ್ಲಿ " ONE LAKH RUPEES ONLY" ಇರುವ ಬರವಣಿಗೆ ಮತ್ತು SHIVA PRAKASH V ಎಂಬ ಬರವಣಿಗೆ ಬೇರೆಯವರು ಬರೆದಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ಆರೋಪಿ ನನ್ನ ಮುಂದೆ ಸಹಿ ಮಾಡಿ ಚೆಕ್ ಅನ್ನು ನೀಡಿರುತತಾರೆ ಎಂದು ಹೇಳುತ್ತಾರೆ. ನಿಪಿ 1 ಚೆಕ್ ಆರೋಪಿಯು ಸಹಿ ಮಾಡಿ ನನಗೆ ನೀಡುವಾಗ ಖಾಲಿ ಚೆಕ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ 1 ಚೆಕ್ ಅನ್ನು ತುಂಬಿಸಿ ಜಮೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿ ನೋಟೀಸ್ ಕಳುಹಿಸುವ ಮುಂಚೆ ಸದರಿ ವಿಷಯವನ್ನು ಆರೋಪಿಗೆ ತಿಳಿಸಿರುತ್ತೇನೆ . ನಾನು ಸದರಿ ವಿಷಯವನ್ನು ನಮ್ಮ ಪಿರ್ಯಾದಿನಲ್ಲಿ ತಿಳಿಸಿರುತ್ತೇನೆ . ನಿಪಿ 3 ನೋಟೀಸ್ ನಲ್ಲಿ ಇರುವ ಮಾಹಿತಿ ನನಗೆ ತಿಳಿದಿರುತ್ತದೆ . ಪಿರ್ಯಾದಿನಲ್ಲಿ ಇರುವ ಮಾಹಿತಿ ನನಗೆ ತಿಳಿದಿರುತ್ತದೆ . ಪಿರ್ಯಾದಿನಲ್ಲಿ ಇರುವ ಮಾಹಿತಿ ನನಗೆ ಗೊತ್ತಿರುವುದಿಲ್ಲ , ವಕೀಲರು ಹೇಳಿದಂತೆ ನಾನು ಸಹಿ ಮಾಡಿರುತ್ತೀನಿ ಎಂದರೆ ಸರಿಯಲ್ಲ. ನಾನು ಈ ಪ್ರಕರಣದ ಆರೋಪಿಗೆ ರೂ. 50,000 ಹಣವನ್ನು ಜುಲೈ 2024 ರಂದು ನೀಡಿರುತ್ತೇನೆ ಎಂದರೆ ಸಾಕ್ಷಿ 1 ಲಕ್ಷ ರೂಪಾಯಿ ನೀಡಿರುತ್ತೇನೆ ಎಂದು ಹೇಳುತ್ತಾರೆ . ಸದರಿ 50 ಸಾವಿರ ಹಣ ಸಾಲದ ಬಾಬ್ತು ನನಗೆ ಬಡ್ಡಿ ಸೇರಿಕೊಂಡು ಆರೋಪಿ ಫೋನ್ ಫೇ ಮೂಲಕ ವಾಪಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಎಲ್ಲಾ ಹಣ ನೀಡಿದರು ಸಹ ನಿಪಿ 1 ಖಾಲಿ ಚೆಕ್ ಅನ್ನು ವಾಪಸ್ ಕೇಳಿದರು ನೀಡದೇ ಈ ಪ್ರಕರಣ ದಾಖಲಿಸಿರುತತೇನೆ ಎಂದರೆ ಸರಿಯಲ್ಲ. ಆರೋಪಿ ಹಲವಾರು ಬಾರಿ ನನ್ನನ್ನು ನಿಪಿ 1 ಖಾಲಿ ಚೆಕ್ ಅನ್ನು ವಾಪಸ್ ಮಾಡಲು ಕೇಳಿರುತ್ತಾರೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು , ಆಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು